# ಹೀಗೊಂದು ಊಟದ ಮಣೆ

ಇದು ನಮ್ಮ ತಾತ ಮುತ್ತಾತನ ಕಾಲದಿಂದಲೂ ಊಟ ಮಾಡಲು ಬಳಸುತ್ತಿದ್ದ ಮಣೆ. ಮೂರು ಕಾಲುಗಳು ಹಾಗೂ ಮೇಲೆ ವೃತ್ತಾಕಾರದಿಂದ ಕೂಡಿದ ಈ ಮಣೆಯನ್ನು ಹಿತ್ತಾಳೆ ಲೋಹದಿಂದ ತಯಾರಿಸಿದ್ದಾರೆ.

ಸುಮಾರು 68 ವರ್ಷಗಳಿಂದ ನಾನೇ ನೋಡಿದ ಪ್ರಕಾರ, ಮಠಗಳಲ್ಲಿ ಹಾಗೂ ನಮ್ಮ ಹಳ್ಳಿಗಳ ಮನೆಗಳಲ್ಲಿ ಹಾಗೂ ಹಿರಿಯರು ಮನೆಯ ಯಜಮಾನರು ಊಟಕ್ಕೆ ಕೂತಾಗ ಈ ತೇವಟಿಗೆ (ಮಣೆ)ಯ ಮೇಲೆ ಹಿತ್ತಾಳೆ ತಟ್ಟೆ/ ಗಂಗಾಳ ಇಟ್ಟು ಊಟ ಬಡಿಸುತ್ತಿದ್ದರು. ನಮ್ಮ ತಾತ ಮತ್ತು ಅವರ ಓರಗೆಯವರು ಪಂಕ್ತಿಯಲ್ಲಿ ಚಕ್ಕಳ ಮಕ್ಕಳ ಭಂಗಿಯಲ್ಲಿ ಕುಳಿತು ಸಾವಕಾಶವಾಗಿ ತೃಪ್ತಿಯಿಂದ ಊಟ ಮಾಡುತ್ತಿದ್ದರು. ಅಂದ ಹಾಗೆ ನಮ್ಮ ಮನೆಯಲ್ಲಿ ಇಂದಿಗೂ ನಾನು ಊಟ ಮಾಡುವುದು ಈ 'ಮಿನಿ ಡೈನಿಂಗ್ ಟೇಬಲ್' ಅನ್ನು ಬಳಸಿಯೇ.

—ಆರ್. ವೀರೇಶ್ ಕುಮಾರ್





# ನಿಸರ್ಗಪ್ರೇಮಿ ಗಣೇಶ!

ಪರಿಸರಸ್ನೇಹಿ ಗಣೇಶನ ಹಬ್ಬವನ್ನು ಆಚರಿಸುವ ಉದ್ದೇಶದಿಂದ ಮನೆಯಲ್ಲಿಯೇ ಸುಮಾರು ಐದಾರು ಮಣ್ಣಿನ ಮೂರ್ತಿಗಳನ್ನು ತಯಾರಿಸುವ ಯೋಜನೆ ಹಾಕಿಕೊಂಡಿದ್ದೆ. ಹೀಗೆ ಮಣ್ಣಿನ ಗಣಪತಿ ಮೂರ್ತಿಗಳನ್ನು ತಯಾರಿಸುವಾಗ ಅದರೊಳಗೆ ವಿವಿಧ ಹಣ್ಣಿನ ಬೀಜಗಳನ್ನು ಇಟ್ಟು ಮೂರ್ತಿ ತಯಾರಿಸಬಹುದಲ್ಲ ಎಂಬ ಆಲೋಚನೆ ಹೊಳೆಯಿತು.

ಅದರಂತೆ ಗಣೇಶನ ಮೂರ್ತಿ ಮತ್ತು ಮೋದಕಗಳನ್ನು ಮಣ್ಣಿನಿಂದ ತಯಾರಿಸಿ ಅದರೊಳಗೆ ವಿವಿಧ ಹಣ್ಣಿನ ಬೀಜಗಳನ್ನು ಇರಿಸಿದೆ. ಹಬ್ಬದ ಕೊನೆಯ ದಿನ ಮೂರ್ತಿ ಮೋದಕಗಳನ್ನು ನದಿಯಲ್ಲಿ ವಿಸರ್ಜಿಸದೆ ಊರ ಹೊರಗೆ ಗಿಡಮರಗಳ ಕೆಳಗಿಟ್ಟು ಬಂದೆ. ಮಳೆನೀರು ಮತ್ತು ಇಬ್ಬನಿಗೆ ಕರಗಿದ ಮೂರ್ತಿಗಳ ಒಳಗಿನಿಂದ ಬೀಜಗಳು ಮೊಳಕೆಯೊಡೆದು ಸಸಿಯಾಗಿ ಹೊರಬಂದಿವೆ. ಪಟಾಕಿ ಸಿಡಿಸದೆ, ದೀಪ ಹಚ್ಚದೆ, ಧೂಪ ಬೆಳಗದೇ ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಹಬ್ಬ ಆಚರಿಸಿದ ಖುಷಿ ನನ್ನದಾಗಿದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

# ಕೋತಿಗಳು ಸಾರ್ ಕೋತಿಗಳು!



ಮಂಗಗಳು ಈಗ ಕಾಡು ಬಿಟ್ಟು ನಾಡಿನಲ್ಲೂ ಸಂಚರಿಸುತ್ತಿವೆ. ಹೊಟ್ಟೆಪಾಡಿಗಾಗಿ ಅವು ಈಗ ಪಟ್ಟಣದಲ್ಲೂ ಸುತ್ತಾಡುತ್ತಿವೆ. ಸಾಗರದ ಪ್ರಮುಖ ರಾಷ್ಟ್ರೀಯ ಹೆದ್ದಾರಿ 206ರ ಬಿ.ಎಚ್. ರಸ್ತೆಯಲ್ಲಿ ಒಂದು ದಿನ ಮಧ್ಯಾಹ್ನ ನಿಂತುಕೊಂಡಿದ್ದಾಗ ಮರದಿಂದ ಸುಮಾರು ಹತ್ತು ಮಂಗಗಳು ವಿದ್ಯುತ್‌ಲೈನ್ ಮೇಲೆ ಪಥ ಸಂಚಲನ ನಡೆಸಿದವು.

ಇವೇನು ಸ್ವಲ್ಪವೂ ಹೆದರದೆ ವಿದ್ಯುತ್ ತಂತಿ ಮೇಲೆ ಹೋಗುತ್ತಿವೆಯಲ್ಲ ಎಂದು ಗಾಬರಿಗೊಂಡೆ. ಅವು ಒಂದನ್ನು ಮತ್ತೊಂದು ಅನುಸರಿಸಿ ಸುರಕ್ಷಿತ ತಂತಿಯ ಮೇಲೆ ಸಾಗಿದವು. ಮೊಬೈಲ್ ತೆಗೆದು ಕ್ಲಿಕ್ಕಿಸಿದಾಗ ಎಂಟು ಮಂಗಗಳು ಸೆರೆಸಿಕ್ಕವು. ಒಂದು ಮಂಗ ಉಲ್ಟಾ ತಿರುಗಿ ಸಾಗಿತು. ಅತ್ತ ಇತ್ತ ಯಾವ ಮರವೂ ಇಲ್ಲದ ಕಾರಣ ಅವು ತಂತಿಯ ಮೇಲೆ ಹಾಗೇ ಮುಂದೆ ನಡೆದವು.

—ಗಣಪತಿ ಶಿರಳಗಿ, ಸಾಗರ